ಬರುತ್ತವೆಯೇ? ಆದರೆ ಅದಕ್ಕಿಂತಲೂ ಬಲವಾದ ಹಿಡಿತ ತನ್ನ ಭಯ, ಅವಮಾನಗಳಲ್ಲಿ ಇತ್ತಲ್ಲ... ಆ ಭಾವನೆಗಳು ಮೊಗ್ಗಾಗಿ ಚಿಗುರೊಡೆಯಲು ಕೂಡ ಬಿಡದೇ ಜೋಪಾನ ಮಾಡುತ್ತಿದ್ದೆ. ಒಂದು ಮಾತು ಹೇಳಿದರೆ ಅವನ ಉತ್ತರ ನನಗೇ ಗೊತ್ತಿರುತ್ತಿತ್ತು.

'ಈಗೇನು, ಊಟ, ತಿಂಡಿ, ಉಡಲು, ತೊಡಲು ಯಾವುದಕ್ಕೆ ಕಡಿಮೆ ನಿನಗೆ. ಸಮಸ್ಯೆಗಳಿಗೆ ಹೊಂದಿಕೊಳ್ಳುವ ಗುಣ ನಿನಗಿದೆ. ಇಷ್ಟಿರುವಾಗ ಮತ್ತೇನು ಕೊರತೆ?'

ಮೈಯಲ್ಲಿ ಆಲಸ್ಯ ಕಂಡರೆ 'ಇದೇನು ಸಾಮಾನ್ಯ. ಎಲ್ಲರಿಗೂ ಆಗುವಂತಹುದು. ಒಂದು ಮಾತ್ರೆ ತೊಗೊ. ಸರಿಯಾಗುತ್ತೆ' ಅಷ್ಟೇ ನಿರ್ಲಿಪ್ತವಾದ ಧ್ವನಿ. ಯಾವುದಕ್ಕೂ ಏರು ಪೇರಿಲ್ಲ. ಆಗೆಲ್ಲ ಅನ್ನಿಸುತ್ತಿತ್ತು, ಗಂಡ ತನ್ನ ಪಕ್ಕವೇ ಕೂರಬೇಕು. ಹಣೆಯ ಮೇಲೆ ಕೈಯಿಟ್ಟು ಜ್ವರ ನೋಡಬೇಕು. 'ಮಲಗು, ನಾಲ್ಕು ದಿನ ವಿಶ್ರಾಂತಿ ತೊಗೊ. ಅಡುಗೆಯವರಿಗೆ ಹೇಳ್ತೀನಿ... ಒಂದೆರಡು ದಿನ ಮಾಡ್ತಾರೆ.' 'ಹೊಸ ಸಿನಿಮ ಬಂದಿದೆ. ಟಿಕೇಟ್ ತಂದಿದ್ದೀನಿ. ಬಾ ಹೋಗಿ ಬರೋಣ... ಹೊರಗೇ ಊಟ ಮಾಡಿಕೊಂಡು ಬರೋಣ ಬಾ...' 'ಹೊಸ ತರಹದ ಸೀರೆ ಬಂದಿದೆ. ಬಾ ಹೋಗಿ ತರೋಣ... ಈ ಬಣ್ಣ ನಿನಗೆ ಒಪ್ಪುತ್ತೆ. ಈ ಡಿಸೈನ್ ಚೆನ್ನಾಗಿ ಕಾಣುತ್ತೆ...' ಊಹೂಂ... ಊಹೂಂ... ಊಹೂಂ... ಒಂದೇ ಒಂದು ದಿನವೂ ಇಂಥದ್ದು ಆಗಲೇ ಇಲ್ಲ. ಮನೆಯಲ್ಲಿ ಕೆಲಸ ಜಾಸ್ತಿ ಅಂದರೆ' ಇರಲಿ... ಜನ ಇದ್ದಾರಲ್ವ. ಇದು ಸಾಮಾನ್ಯ. ಹೇಗಿದ್ರೂ ನಿನಗೆ ತವರಿನಲ್ಲಿ ಅಭ್ಯಾಸ ಇದೆಯಲ್ಲ...' ಅಂತ ನಿರುಮ್ಮಳವಾಗಿ ಹೊರಟುಬಿಡುತ್ತಿದ್ದ.

ಉದ್ಯೋಗಕ್ಕೆ ಹೋಗುವ ಮೈದುನರು, ಓದುವ ನಾದಿನಿಯರು ಎಲ್ಲರಿಗೂ ಮಾಡಿ ಹಾಕುವಾಗ ತನಗೆ ಸಾಕಾಗುತ್ತಿತ್ತು.

ನನ್ನ ಮನದ ಸಣ್ಣ ಸಣ್ಣ ಆಸೆಗಳು ಕೂಡ ಚಿಗುರದೇ ಬತ್ತಿ ಬತ್ತಿ ಹೋಗುತ್ತಿರುವಾಗ ಅಮ್ಮ ಹೇಳುತ್ತಿದ್ದಳು 'ವಾಸಂತಿ ನಿನಗೆ ಇಲ್ಲಿ ಕೂಡ ಒಳ್ಳೆ ಹೆಸರು. ಗಂಡನ ಮನೇಲಿ ಕೂಡ. ಎಷ್ಟು ಹೊಗಳ್ತಾರೆ ಗೊತ್ತ ಎಲ್ರೂ... ಸಾರ್ಥಕ ಆಯ್ತು ಕಣೆ.' ನನಗನ್ನಿಸಿತ್ತು... ಏನು ಸಾರ್ಥಕವೋ. ನಮ್ಮ ಆಸೆಗಳ ನೀರಿನ ಬಾವಿ ಗಂಡನ ಹೃದಯದಲ್ಲಿ ತಾನೇ ಇರೋದು. ಎಲ್ಲವನ್ನೂ ತೂಕಕ್ಕೆ ಹಾಕುವವನಿಗೆ, ನನ್ನ ಮನಸ್ಸು, ಭಾವನೆಗಳಿಗೆ ಸ್ಥಾನವೆ ಇಲ್ಲದಾಗ... ಇನ್ನು ನೀರು ಕೇಳೋದಾದ್ರೂ ಹೇಗೆ!

ಹೀಗೇ ಸಾಗುತ್ತಿದ್ದ ಬದುಕಿನಲ್ಲಿ ನನಗೆ ಹೇಳದೇ ಕೇಳದೇ ಕನಸೊಂದು ಚಿಗುರಿಯೇ ಬಿಟ್ಟಿತು. ನಾನು ಗರ್ಭಿಣಿ ಆಗಿದ್ದೆ. ನನ್ನ ಮನದ ಮೂಲೆಯಲ್ಲಿ ವಿಪರೀತ ಸಂಭ್ರಮ ಕಾಣಿಸಿಕೊಂಡಿತು. ಆನಂದದ ಜಗತ್ತು ನನ್ನದಾಗಿಬಿಟ್ಟಿತು. ಯಾರ ಬಳಿಯಲ್ಲಿಯೂ ಹಂಚಿಕೊಳ್ಳಲಾಗದಷ್ಟು ಆನಂದ. ಅವತ್ತು ಮನಸ್ಸು ಪುಳುಕಿತಗೊಂಡಿತ್ತು. ಕೋಣೆಯಲ್ಲಿ ಅವನಿಗೆ ನಾಚಿ ನಾಚಿ ನಿಧಾನವಾಗಿ ಹೇಳಿದೆ, 'ನೀವು ಅಪ್ಪ ಆಗ್ತ ಇದ್ದೀರ' ಅಷ್ಟು ಹೇಳುವಷ್ಟರಲ್ಲಿ ನನ್ನ ಉಸಿರು ಬಾಯಿಗೆ ಬಂದಿತ್ತು. ಅವರ ಎದೆಯ ಮೇಲೆ ತಲೆಯಿಟ್ಟು ತಣಿಸುವ ಆಸೆ. ಅಷ್ಟರಲ್ಲಿ ಉತ್ತರ ಬಂದಿತ್ತು... 'ಗೊತ್ತಾಯ್ತು. ಡಾಕ್ಟರ್ ಸಿಕ್ಕಿದ್ರು. ಹೇಳಿದ್ರು... ಸ್ವಲ್ಪ ವಿಶ್ರಾಂತಿ ತೊಗೊ' ಮಲಗಲು ಅಣಿಯಾದರು. ನನ್ನ ಮನಸ್ಸಿನ ಬಲೂನ್‌ಗಳೆಲ್ಲ ಒಟ್ಟಿಗೇ ಠಪ್ ಅಂದವು. 'ಹಾಂ... ಗಂಡು ಮಗನೇ ಬೇಕು ಅಂತ ನನಗೆ ಆಸೆ. ನಮ್ಮ ವಂಶ ಬೆಳೀಬೇಕು. ಮುಂದಿನ ಸಲ ಚೆಕ್ ಅಪ್ ಅಂತ ಹೋದಾಗ ಅದನ್ನೂ ಕೇಳಿ ತಿಳಿದುಕೊ. ಈಗೇನು ಅದನ್ನೆಲ್ಲ ಕಂಪ್ಯೂಟರ್‌ನಲ್ಲೇ ಹೇಳಿ ಬಿಡ್ತಾರೆ. ಹೆಣ್ಣಾದ್ರೆ ಬೇಜಾರೇನಿಲ್ಲ... ಆದ್ರೆ ಗಂಡು ಬರಲಿ ಅಂತ ಆಸೆ. ಅವನೇ ಹಿರಿಮಗ ಆಗಬೇಕು.' 'ನೀವೂ ಬರ್ತೀರಲ್ಲ ಚೆಕ್ ಅಪ್‌ಗೆ ಹೋದಾಗ...' ಮೆಲ್ಲನೆ ನುಡಿದಿದ್ದೆ. ಮನಸ್ಸು ನಿರಾಸೆಯ ಆಳದಲ್ಲಿ ಹೂತು ಹೋಗಿತ್ತು.

'ನಾನು ಬರಬೇಕಾ? ಮನೆ ಹತ್ರಾನೇ ಇದ್ಯಲ್ಲ ಆಸ್ಪತ್ರೆ... ಬೇಕಿದ್ರೆ ಕೆಲಸದ ನಿಂಗಿಗೆ ಹೇಳ್ತೀರ್ನಿ...